MYSORE LEGISLATIVE ASSEMBLY

FIFTH DAY.

Tuesday, 3rd March 1964.

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Interest and penal interest charged from the ryots who obtain loans from Government.

*Q.—122. Sri R. N. LAKSHMIPATHI (Gauribidanur).—

Will the Government be pleased to state :—

what is the interest and the penal interest charged from ryots who obtain loans from Government like Takavi, Land Improvements, etc. ?

A.—Sri M. V. KRISHNAPPA (Minister for Revenue).—

Interest is charged at 5 per cent per annum on Takavi and Land Improvement Loans. Penal interest at 9 per cent per annum is levied upon all overdue instalments of interest or principal and interest.

So far as loans for construction of irrigation wells are concerned, the loan is free of interest for the first year from the date of disbursement of the first instalment and carries a concessional rate of interest at 3 per cent from the second year onwards. Penal interest is, however, 9 per cent in respect of overdue instalments of these loans also.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಕಾವಿ ಸಾಲವನ್ನು ಬಹಳ ಮಟ್ಟಿಗೆ ಬಡವರಾಗಿರತಕ್ಕವರೇ ತೆಗೆದುಕೊಳ್ಳುವುದರಿಂದ ಇವರಿಗೆ ಬಡ್ಡಿಯನ್ನು ಶೇಕಡ 5 ರಂತೆ ಹಾಕಿ ಪೀನಲ್ ಬಡ್ಡಿಯನ್ನು ಶೇಕಡ 9 ರಂತೆ ವಿಧಿಸಿರತಕ್ಕದ್ದು ಬಹಳ ಜಾಸ್ತಿಯಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—5 ಪರ್ಸೆಂಟ್ ಬಡ್ಡಿಯೇನೂ ಜಾಸ್ತಿಯಾಗುವುದಿಲ್ಲ. ಕಾಲಕ್ಕೆ ಸರಿಯಾಗಿ ಹಣ ಪಾವತಿ ಮಾಡದೆ ಇರತಕ್ಕವರಿಗೆ 9 ಪರ್ಸೆಂಟ್ ಬಡ್ಡಿ ಹಾಕಲಾಗಿದೆ. ಇಷ್ಟು ಹಾಕಿದ್ದಾಗ್ಯೂ ಈಗ ವಸೂಲಾಗತಕ್ಕ ಬಾಕಿ ಇನ್ನೂ 35 ಕೋಟಿ ನಿಂತಿದೆ. ಆದ್ದರಿಂದ 5 ಪರ್ಸೆಂಟ್ ಬಡ್ಡಿಯೇನೂ ಜಾಸ್ತಿಯಾಗುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಂಥ ಪರ್ಸೆಂಟ್ ಬಡ್ಡಿ ಹಾಕತಕ್ಕ ಸೊಸೈಟಿ ಯಾವುದೂ ಇಲ್ಲ ಎನ್ನುವುದಿರಲ, ಮಾರ್ಜಾಡಿ ಸಹಿತ ಇಷ್ಟು ಬಡ್ಡಿ ಹಾಕುವುದಿಲ್ಲ ಎಂಬುದು ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಮಾರ್ಜಾಡಿಯ ಹತ್ತಿರ ಸಾಲ ತೆಗೆದುಕೊಂಡ ಹಾಗೆ ಕಾಣುವುದಿಲ್ಲ. ಇಷ್ಟು ಕನ್‌ಸೆಷನ್ ಕೊಟ್ಟಿದ್ದಾಗ್ಯೂ ಸಾಲ ಹಿಂದಿರುಗಿ ಬರುತ್ತಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಬಾವಿ ಪೂರ್ತಿಯಾದ ನಂತರ ಹಣವನ್ನು ವಸೂಲು ಮಾಡುವಂತೆ ಆರ್ಡರ್ ಮಾಡಲು ಸಾಧ್ಯವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಷ್ಟು ಕಡಮೆ ದರದಲ್ಲಿ ಬಹುಶಃ ಇನ್ನಾವ ಸಾಲವನ್ನೂ ಕೊಡುತ್ತಿಲ್ಲವೆಂದು ಕಾಣುತ್ತದೆ. 2500 ರೂಪಾಯಿಗಳನ್ನು ಸಾಲವಾಗಿಯೂ, 500 ರೂಪಾಯಿಗಳನ್ನು ಸಬ್ಸಿಡಿಯು ರೂಪದಲ್ಲೂ ಕೊಡಲಾಗುತ್ತಿದೆ. ಇಷ್ಟೇ ಅಲ್ಲದೆ ಮೊದಲನೆಯ ವರ್ಷ ಬಡ್ಡಿ ಇಲ್ಲ. ಇದಕ್ಕಿಂತಲೂ ಇನ್ನೇನು ರಿಯಾಯ್ತಿ ಬೇಕು ?

ಶ್ರೀ ಬಿ. ಚನ್ನಬೈರೇಗೌಡ.—ಸರ್ಕಾರದವರು ಕೊಡತಕ್ಕ ಹಣದಲ್ಲಿ ಬಹು ಭಾಗ ನೌಕರರ ಪಾಲಾಗುತ್ತದೆಂಬುದು ಸರ್ಕಾರದವರಿಗೆ ಗೊತ್ತಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೊತ್ತಿಲ್ಲ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ನೀರಾವರಿ ಬಾವಿಗಳಿಗೆ ಎರಡನೇ ವರ್ಷದಲ್ಲಿ 3 ಪರ್ಸೆಂಟ್ ಬಡ್ಡಿ ವಿಧಿಸುವಹಾಗೆ ಜಮೀನು ಅಭಿವೃದ್ಧಿ ಸಾಲಕ್ಕೂ 3 ಪರ್ಸೆಂಟ್ ಬಡ್ಡಿ ವಿಧಿಸಲು ಸಾಧ್ಯವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ.

ಶ್ರೀ ಸಿದ್ದಯ್ಯ ಕಾಶೀವಾಠ್.—ರ್ಯಾಂಡ್ ರೆವೆನ್ಯೂ ನಸ್ಪೆಂಡ್ ಮಾಡಿರುವಲ್ಲಿಯೂ ಈ ಪೀನರ್ ಇಂಟ್ರೆಸ್ಟ್ ವಸೂಲ್ಮಾಡುತ್ತಿರುವುದು ಸರಿಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೂಲ್ಸಿಗೆ ವಿರೋಧವಾಗಿ ವಸೂಲ್ಮಾಡಿದ್ದರೆ ಅಂಥ ಕೇಸುಗಳಲ್ಲಿ ಕನ್‌ಸೆಷನ್ ಕೊಡಲಾಗುತ್ತದೆ.

Sri GANJI VEERAPPA.—Wherever such scarcity conditions prevail, will Government consider the question of not levying penal interest from such people who are not in a portion to pay even instalments ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ penal interest ಅನ್ನು as a rule ಕೊಡಬೇಕು ಎಂದಿದೆ. But Government has got power to waive penal interest also.

ಶ್ರೀ ಸಿ. ಆರ್. ರಂಗೇಗೌಡ.—ಹಿಂದೆ ಗ್ರೋಮೋರ್ ಫುಡ್ ಲಬರಲೈಸ್ಡ್ ಸ್ಕೀಮಿನಲ್ಲಿ 500 ರೂಪಾಯಿಗಳನ್ನು ಬಾವಿಗಳಿಗಾಗಿ ಕೊಟ್ಟಿದ್ದರು. ಆದರೆ ಅಲ್ಲಿ ಬಾವಿ ಆಗದ ಜಾಗವು ತೋಂದರೆಯುಲ್ಲಿದ್ದರೆ, ಅಂಥ ಸಂದರ್ಭದಲ್ಲಾದರೂ ಕನ್‌ಸೆಷನ್ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಬಾವಿಗಳನ್ನು ತೆಗೆಯಲು 3 ಸಾವಿರ, 2,500 ರೂಪಾಯಿಗಳನ್ನು ಕೊಡಲಾಗುತ್ತಿದೆ. ಆ ಹಿಂದಿನ ತ್ರಿಶಂಕು ಸ್ಥಿತಿಯಲ್ಲಿರತಕ್ಕವರಿಗೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮಳೆಯಿಲ್ಲದೆ ಸಾಲ ತೀರಿಸಲು ಸಾಧ್ಯವಾಗದಿದ್ದಾಗ ಪೀನರ್ ಇಂಟ್ರೆಸ್ಟ್ ಬಡ್ಡಿಗಿಂತ ಜಾಸ್ತಿ ಆಗಬಾರದು. ಆದ್ದರಿಂದ ಇದನ್ನು 3 ಪರ್ಸೆಂಟಿಗಿಳಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥ ಪ್ರಮೇಯ ಕಂಡುಬರುವುದಿಲ್ಲ.

ಶ್ರೀ ಟಿ. ಮಾದಯ್ಯ ಗೌಡ.—ಸಾಲ ಕೊಡತಕ್ಕ ಉದ್ದೇಶ ಸಾಧನೆಯಾಗತಕ್ಕ ಕಾಲದಿಂದ ಸಾಲವನ್ನು ವಾಪಸ್ಸು ಪಡೆಯುವಂತೆ ಒಂದು ಸಂಬಂಧನೆಯನ್ನು ಮಾಡಲಾಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಕೃಷ್ಣ ಶೆಟ್ಟಿ.—ಬಡ್ಡಿ ಕೊಡುವುದಕ್ಕೆ ಕಷ್ಟವಾಗಿರುವಾಗ ಇನ್ನು ಪೀನರ್ ಇಂಟ್ರೆಸ್ಟ್ ಕೊಡಲು ಹೇಗೆ ಸಾಧ್ಯ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿಜ, "ಸಾಲವನ್ನು ಕೊಂಬಾಗ ಹಾಲೋಗರುಂಡಂತೆ—ಸಾಲಗನು ಬಂದು ಎಳೆವಾಗ ಕಿಬ್ಬಯಿ ಕೀಲು ಮುರಿದಂತೆ ಸರ್ವಜ್ಞ....." ಹಾಗಾಯಿತು.